

ಜಪಾನಿಯರಿಗೆ ಮದುವೆಯಾಗಲೂ ಮನಸ್ಸಿಲ್ಲ, ಮಕ್ಕಳನ್ನು ಮಾಡಿಕೊಳ್ಳಲೂ ಪುರುಸೊತ್ತಿಲ್ಲ. ಯಂತ್ರಗಳ ಜೊತೆ ಯಂತ್ರಮಾನವರಾಗಿರುವ ಅವರ ಮಡಿಲಲ್ಲಿ ಈಗ ರೋಬಾಟ್ ಬೇಬಿ ನಲಿದಾಡುತ್ತಿದೆ. ತೊಟ್ಟಿಲು ತೂಗುವುದು ಜಾಸ್ತಿಯಾದರೆ ಅಬ್ಬರಿಸಿ ಅಳುತ್ತದೆ, ಗಂಡ- ಹೆಂಡತಿ ಜಗಳ ಮಾಡಿಕೊಂಡರೆ ಆ ಕೂಗಿಗೆ ಕೇಕೆ ಹಾಕಿ ಅಪಹಾಸ್ಯವನ್ನೂ ಮಾಡುತ್ತದೆ. ರೋಬಾಟ್ ಹೆಂಡತಿ, ರೊಬೊಟ್ ಮಗು.. ಆದರೆ ರೋಬಾಟ್ ಗಂಡ ಮಾತ್ರ ಯಾಕಿಲ್ಲ ಎಂಬ ಪ್ರಶ್ನೆ ಮಹಿಳಾವಾದಿಗಳನ್ನು ಇನ್ನೂ ಕಾಡಿದ ಹಾಗಿಲ್ಲ.

ಅಮೆರಿಕದಲ್ಲಿ ಮಧ್ಯರಾತ್ರಿ ನಿಟ್ ಮಾಡುವವರು ಜಾಸ್ತಿಯಾಗಿದ್ದಾರೆ. ಉಣ್ಣೆದಾರವನ್ನು ತಪ್ಪು ತಪ್ಪಾಗಿ ಹೆಣೆದು ಮನೆಯವರಿಂದ ಬೈಸಿಕೊಳ್ಳುವವರು ರಾತ್ರಿ ಮರದ ಕೆಳಗೆ ಕೂತು ರೆಂಬೆಗಳಿಗೆಲ್ಲ ಸ್ವೆಟರ್ ತೊಡಿಸಿದ್ದಾರೆ. ಅಲ್ಲಿಯ ವೆಸ್ಟ್ ಕೇಪ್ ಮೇ ನಗರದಲ್ಲಿ 'ಮಿಡ್‌ನೈಟ್ ನಿಟ್ಟರ್'ಗಳದ್ದೇ ಕಾರುಬಾರು.



ನ್ಯೂಜಿಲೆಂಡ್‌ನ ಫುಲ್ಲರ್ 'ನಲ್ಲೆ ನೀ ನನ್ನ ಮದುವೆಯಾಗುವೆಯಾ?' ಎಂದು ಟಿ.ವಿ ಜಾಹೀರಾತು ಮೂಲಕ ಮದುವೆ ಪ್ರಸ್ತಾಪ ವಿಟ್ಟ. ಟಿ.ವಿ ನೋಡಿದ ನಲ್ಲೆ ಖುಷಿಯಿಂದ ಕುಪ್ಪಳಿಸಿದಳು. ಬಿಲ್ಲು 2000 ಡಾಲರ್ ಬಂತು. ಮದುವೆಯನ್ನೂ ಜಾಹೀರಾತು ಮೂಲಕವೇ ಮಾಡಿಕೊಂಡರೆ ಉಂಗುರ, ಊಟದ ಖರ್ಚನ್ನು ಉಳಿಸಬಹುದಿತ್ತೇ?

ಮಾದಕ ವಸ್ತು ದಂಧೆ ಮಾಡುವವರು ಹೊಸ ಹೊಸ ಸಂಶೋಧನೆ ಮಾಡುತ್ತಿದ್ದಾರೆಂಬುದಕ್ಕೆ ಈ ಅನಾನಸ್ ಹಣ್ಣೇ ಸಾಕ್ಷಿ. ಒಳಗೆ ಕೊಕೈನ್ ಇಟ್ಟು ಹೇಗೆ ಹಣ್ಣನ್ನು ನೀಟಾಗಿ ಪ್ಯಾಕ್ ಮಾಡಿದ್ದಾರೆ! ಆದರೆ ಪ್ಲಾಸ್ಟಿಕ್ ಅನಾನಸ್ ಹಣ್ಣಿನ ಮೇಲೆ ಪೊಲೀಸರ ಕಣ್ಣು ಬಿತ್ತು. ತಿನ್ನಲು ಬಾರದ ಹಣ್ಣು ಅಧಿಕಾರಿಗಳಿಗೆ ಸಹಜವಾಗಿ ಕೋಪ ಭರಿಸಿರಬಹುದು.





ಮೂರೆಲೆ ಆಟದಲ್ಲಿ ಮುಳುಗುವ ಮಹಾನ್ ಕ್ರೀಡಾಳುಗಳನ್ನು ಈ ಅಮೆರಿಕದ ಹೈದ ಬರ್ಗ್ ಮುಂದೆ ನಿವಾಳಿಸಿ ಒಗೆಯಬೇಕು. ಎಲೆ ಕಲೆಸಿ ಕಲೆಸಿ ದೊಡ್ಡ ಕಟ್ಟಡವನ್ನೇ ಕಟ್ಟಿದ್ದಾನೆ, ಅದೂ ಸಿಮೆಂಟ್, ಮರಳಿನ ಮಿಶ್ರಣವಿಲ್ಲದೆ. 2,18,792 ಕಾರ್ಡುಗಳು, 44 ದಿನಗಳ ಕೆಲಸ. ಆದರೆ ಕಾರ್ಡ್‌ಗಳನ್ನು ನಿಲ್ಲಿಸುವ ಬದಲು ಕೈಯಲ್ಲಿ ಹಿಡಿದು ಆಟವಾಡಿದ್ದರೆ ಎಷ್ಟು ಹಣ ಗಳಿಸಬಹುದಿತ್ತು ಎಂಬುದು ಕಾರ್ಡ್ ಕ್ರೀಡಾಪಟುಗಳ ಲೆಕ್ಕಾಚಾರ.

ಭಾರತೀಯರು ಪೂರ್ವಜನ್ಮಕ್ಕೆ ಅಪ್ ಆ್ಯಂಡ್ ಡೌನ್ ಮಾಡಿ ಪುಣ್ಯ ಕಟ್ಟಿಕೊಂಡರೆ ಕ್ರೈಸ್ಟ್‌ಚರ್ಚ್‌ನ ಮಹಿಳೆ ವುಡ್‌ಬರಿ ಸತ್ತ ವ್ಯಕ್ತಿಗಳ ಆತ್ಮಗಳನ್ನು ಬಾಟಲ್‌ನಲ್ಲಿ ಬಂಧಿಸಿ ಹರಾಜು ಹಾಕುತ್ತಿದ್ದಾಳೆ. ನೆಟ್ ಹರಾಜಿನಲ್ಲಿ 2,14,000 ಮಂದಿ ಭಾಗವಹಿಸಿದ್ದು ನೋಡಿದರೆ ಬಾಟಲ್‌ನಲ್ಲಿರುವುದು ಶಕ್ತಿಯುತ ಆತ್ಮವೇ ಇರಬೇಕು. ಹಳೆಯ ಬ್ರ್ಯಾಂಡಿ ಬಾಟಲ್ ಎಂದುಕೊಂಡನೋ ಏನೋ ಅನಾಮಿಕನೊಬ್ಬ 1983 ಡಾಲರ್‌ಗೆ ಖರೀದಿಸಿದ್ದಾನೆ. ಆತ್ಮವನ್ನು ಬಂಧಿಸಿದ್ದು ಹೇಗೆ ಎಂಬುದು ಮಾತ್ರ ಗೊತ್ತಾಗಿಲ್ಲ.

'ಮಿಸ್ಟರ್ ಆ್ಯಂಡ್ ಮಿಸಸ್ ರೈಟ್' ಕಂಡುಕೊಳ್ಳಲು ಜಪಾನಿನಲ್ಲಿ ಶಾಲೆಯನ್ನೇ ಶುರು ಮಾಡಿದ್ದಾರೆ. ಹುಡುಗ/ ಹುಡುಗಿಯ ಮುಂದೆ ನಡೆಯುವುದು ಹೇಗೆ, ನುಡಿಯುವುದು ಹೇಗೆ ಎಂಬುದರ ಬಗ್ಗೆ ತರಬೇತಿ ನೀಡುವರಂತೆ. ಜೊತೆಗೆ ಅತ್ತೆ-ಮಾವನನ್ನು ಸಂಪ್ರೀತಗೊಳಿಸುವುದು ಹೇಗೆ ಎಂಬ ಪೇಪರ್ ಕೂಡಾ ಇದೆ. ಪಾಸೋ, ಫೇಲೋ ಎಂಬುದು ಹುಡುಗ/ ಹುಡುಗಿ ಪ್ರೇಮದ ಬಲೆಯಲ್ಲಿ ಸಿಕ್ಕಾಗಲೇ ಗೊತ್ತಾಗುವುದು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65